ನಂಟಿನ ಜೊತೆಗೆ ಅವರ ಕುಟುಂಬಗಳು ಚಾರಿತ್ರಿಕ ಘಟನೆಗೆ ಸಾಕ್ಷಿಯಾಗಿದ್ದೂ ಕಾರಣವಾಗಿರುವುದರಿಂದ ಅದೊಂದು ಬಳುವಳಿ. ಹಾಗಾಗಿಯೇ, ಅವರೆಂದೂ 'ಅಂಬೇಡ್ಕರ್' ಎಂದು ಬಾಯಿತಪ್ಪಿಯೂ ಹೇಳುವುದಿಲ್ಲ. ಬದಲಿಗೆ, 'ಬಾಬಾಸಾಹೇಬ್' ಅನ್ನುತ್ತಾರೆ. ಕರ್ನಾಟಕದಲ್ಲೂ ಅಂಬೇಡ್ಕರ್ ಮೇಲಿನ ಗೌರವಕ್ಕೆ ಕೆಲವರು ಹಾಗೆಯೇ ಕರೆಯುವುದನ್ನು ನೋಡಿದ್ದೇನೆ. ಮರಾಠಿಯಲ್ಲಿ ಗೌರವಯುತವಾಗಿ ಹಾಗೆ ಕರೆವ ಸಂಪ್ರದಾಯ ಹೊಸತೇನಲ್ಲ. ಸಿನಿಮಾದ ಪಿತಾಮಹನಾದ ಧುಂಢಿರಾಜ್ ಗೋವಿಂದ ಫಾಲ್ಕೆಯನ್ನು 'ದಾದಾಸಾಹೇಬ್' ಎಂದು ಕರೆಯುವ ಹಾಗೆ. ಬಾಬಾಸಾಹೇಬ್ ಜೊತೆಗೆ ಈಗ 'ಜೈ ಭೀಮ್' ಕೂಡ ಸೇರ್ಪಡೆಯಾಗಿ, ಪಾಪ್ ಕಲ್ಚರ್‌ನ ಭಾಗವಾಗಿಬಿಟ್ಟಿದೆ.

ಈ ನವಬೌದ್ಧರು ಹಾಗೂ ಪಂಜಾಬಿನ ರವಿದಾಸೀಯ ಸಮುದಾಯ ಅಂಬೇಡ್ಕರ್ ಜಯಂತಿಗಾಗಿ ಒಂದೆಡೆ ಸೇರುತ್ತಾರಾದರೂ ಸೈದ್ಧಾಂತಿಕವಾಗಿ ಒಬ್ಬರ ಬಗ್ಗೆ ಮತ್ತೊಬ್ಬರಿಗೆ ತಕರಾರಿರುವುದನ್ನು ಗಮನಿಸಿದೆ. ಉತ್ತರ ಪ್ರದೇಶದ ಭಕ್ತಿ ಪರಂಪರೆಯ ಸಂತ ರವಿದಾಸರನ್ನು 'ಗುರು ರವಿದಾಸ'ರೆಂದು ಆರಾಧಿಸುವ ಬೃಹತ್ ಪಂಜಾಬಿ ಅಸ್ಪೃಶ್ಯ ಸಮುದಾಯವೇ ಇದೆ. ರವಿದಾಸೀಯರೆಂದು ಕರೆಯಲಾಗುವ ಈ ಸಮುದಾಯ ರವಿದಾಸರು ಹಾಗೂ ಗುರುನಾನಕರ ಉಪದೇಶವನ್ನು ಪಾಲಿಸುವುದುಂಟು. ನವ ಬೌದ್ಧರಿಗಿಂತಲೂ ದೊಡ್ಡ ಇತಿಹಾಸವಿರುವ ಇವರಿಗೆ ರವಿದಾಸೀಯ ಅನ್ನುವುದು ಸಾಂಸ್ಕೃತಿಕ ಸ್ಮೃತಿಯ ಭಾಗ. ರವಿದಾಸರು ಜಾತಿ ವ್ಯವಸ್ಥೆ ವಿರುದ್ಧವಿದ್ದವರು, ಸಮಾನತಾ ತತ್ವವನ್ನು ಬೋಧಿಸಿದವರಾದ್ದರಿಂದ ಬುದ್ಧನಿಗಿಂತ ಭಿನ್ನವಲ್ಲ ಎಂಬುದು ಅವರ ವಾದ. ಇಂದಿಗೂ ಪಂಜಾಬ್‌ನಿಂದ ಉತ್ತರ ಪ್ರದೇಶಕ್ಕೆ ಹೋಗಿ 'ರವಿದಾಸ ಜಯಂತಿ'ಯನ್ನು ಆಚರಿಸುವ ಸಂಪ್ರದಾಯವಿದೆ. ಅಂಬೇಡ್ಕರ್ ನಂತರದ ಪ್ರಮುಖ ದಲಿತ ನಾಯಕರೆಂದು ಕರೆಯಲಾಗುವ ಬಹುಜನ ನಾಯಕ ಕಾನ್ಶಿರಾಮ್ ರಾಮ್ ದಾಸೀಯ ಸಮುದಾಯಕ್ಕೆ ಸೇರಿದವರು. ಚಮ್ಮಾರ ಮೂಲದ ಸಿಖ್ಖರನ್ನು ಹಾಗೆ ಕರೆಯುತ್ತಾರೆ. ಹಾಗಾಗಿ, ಇದೊಂದು ರೀತಿ ಹಿಂದೂ-ಸಿಖ್ ಜಾತಿ. ಇವರೂ ಚಮ್ಮಾರರಾಗಿದ್ದ ರವಿದಾಸರ ಅನುಯಾಯಿಗಳು. ಹಾಗೆ ಹೇಳುವುದಾದರೆ, ಕರ್ನಾಟಕದ ಚಮ್ಮಾರರ ಅಂಗಡಿಗಳಲ್ಲೂ ರವಿದಾಸರ ಚಿತ್ರಗಳನ್ನು ಕಾಣಬಹುದು. ಹಾಗೆಯೇ, ಹರಳಯ್ಯ, ಮಾದಾರ ಚೆನ್ನಯನವರದ್ದು ಕೂಡ. ಬಾಬು ಜಗಜೀವನ್ ರಾಮ್ ಹಾಗೂ ಮಾಯಾವತಿ ಕೂಡ ಚಮ್ಮಾರ ಜಾತಿಗೆ ಸೇರಿದವರು. ಒಂದೇ ಕಾಯಕ ಮಾಡುತ್ತಿದ್ದ ಅಸ್ಪೃಶ್ಯ ಜಾತಿಗಳ ಹೆಸರುಗಳು ಪ್ರದೇಶದಿಂದ ಪ್ರದೇಶಕ್ಕೆ ವ್ಯತ್ಯಾಸವಾಗುತ್ತ ಹೋಗುವುದರಿಂದ ಇದು ಅಷ್ಟು ಸರಳವಾಗಿಲ್ಲ.

ವಸಾಹತುಶಾಹಿ ಆಳ್ವಿಕೆಗೊಳಪಟ್ಟ ದೇಶಗಳಿಗೆ ಪಂಜಾಬಿಗಳು ಅತಿ ಹೆಚ್ಚಿನ ಸಂಖ್ಯೆಯಲ್ಲಿ ವಲಸೆ ಹೋಗಿರುವುದರಿಂದ ರವಿದಾಸೀಯರು ಕೂಡ ಅಲ್ಲೆಲ್ಲ ಹೋಗಿ ನೆಲೆಸಿದ್ದು, ಬೇರಾವ ದಲಿತ ಸಮುದಾಯವೂ ಮಾಡಲಾಗದಂತಹ ಸಂಘಟನೆಯನ್ನು ಮಾಡಿಕೊಂಡಿದ್ದಾರೆ. ಅವರು ತಮ್ಮಷ್ಟು ಶಿಕ್ಷಿತರಲ್ಲವಾದ್ದರಿಂದ ಎಲ್ಲವನ್ನೂ ಭಾವನಾತ್ಮಕ ನೆಲೆಯಲ್ಲೇ ನೋಡುತ್ತಾರೆಂಬುದು ಶಿಕ್ಷಿತ ನವಬೌದ್ಧರ ತಕರಾರು. ಹಾಗೆಯೇ, ಅವರು ರವಿದಾಸೀಯರು, ಹಾಗಾಗಿ ಅಂಬೇಡ್ಕರ್‌ರನ್ನು ತಮ್ಮ ಹಾಗೆ ಸಂಪೂರ್ಣವಾಗಿ ಒಪ್ಪಿಕೊಳ್ಳುವುದಿಲ್ಲ ಎಂಬುದು ಕೂಡ. ಉನ್ನತ ಶಿಕ್ಷಣ ಪಡೆದಿರುವ ಯುವರಾಜ್ ಅವರ ಶ್ರೀಮತಿಯವರ ತಕರಾರು ಕೂಡ ಅದೇ ಆಗಿತ್ತು. ಅವರು ಮಾತಿನ ನಡುವೆ 'ದಲಿತನಾಗಿ ಹುಟ್ಟಿದೆನಾದರೂ, ದಲಿತನಾಗಿ ಸಾಯುವುದಿಲ್ಲ' ಎಂದು ಬಾಬಾಸಾಹೇಬ್ ಹೇಳಿದ್ದರು ಎಂದರು. ಆಗ ಅಂಬೇಡ್ಕರ್ ಹೇಳಿದ್ದು 'ಹಿಂದೂವಾಗಿ ಹುಟ್ಟಿದ್ದೇನಾದರೂ ಹಿಂದೂವಾಗಿ ಸಾಯಲಾರೆ' ಎಂದಲ್ಲವೇ ಎಂದು ನಾನು ಸರಿಪಡಿಸಿದೆ. ಯುವರಾಜ್ ಕೂಡ ತಮ್ಮ ಶ್ರೀಮತಿಗೆ ಅದು ತಪ್ಪು ಹೇಳಿಕೆ ಎಂದು ಹೇಳಿದರು. ಸಂಭಾಷಣೆಯನ್ನು ಮುಂದುವರೆಸಿದ ನಾನು, ಅಸ್ಪೃಶ್ಯ ಜಾತಿಗಳಲ್ಲಿ ಹುಟ್ಟಿದ ಮಾತ್ರಕ್ಕೆ ಎಲ್ಲರೂ ದಲಿತರಾಗಲು ಸಾಧ್ಯವಿಲ್ಲ. ಹಾಗೆ ಕರೆಯುವುದು ಜಾತಿವಿರೋಧಿ ಸಮಸಮಾಜದ ಧ್ಯೇಯ ಹೊಂದಿರುವ ಕ್ರಾಂತಿಕಾರಿ ದಲಿತ ಇತಿಹಾಸಕ್ಕೆ ಮಾಡುವ ಅವಮಾನವಷ್ಟೆ. ದಲಿತ ಅನ್ನುವುದು ಬ್ರಾಹ್ಮಣಶಾಹಿ ಮೇಲುಜಾತಿಗಳು ಅಸ್ಪೃಶ್ಯ ಜಾತಿಗಳಿಗೆ ನೀಡಿದ್ದಲ್ಲ. ದಲಿತ ಅನ್ನುವುದು ಮೇಲ್ಜಾತಿಗಳು ಮಾಡುತ್ತಿರುವ ಶೋಷಣೆ, ಅವಮಾನ, ದೌರ್ಜನ್ಯ,